ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 31.07.2026

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ.ವಿ.ಎಸ್.ಡಿ. ವಕೀಲರಿಂದ

1. ಸರ್ವೇ ನಂಬರ್ 71/10 ರಲ್ಲಿ ಒಟ್ಟು ಎರಡೂವರೆ ಎಕರೆ ಜಮೀನು ಇತ್ತು. ಅದನ್ನು ನಾನು ಮತ್ತು ನನ್ನ ಸಹೋದರ ಇಬ್ಬರು ವಿಭಾಗ ಮಾಡಿಕೊಂಡಿರುತ್ತೇವೆ. ನಮ್ಮ ತಂದೆಗೆ 4 ಜನ ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇದ್ದಳು. ನನ್ನ ತಂದೆ ಮೃತರಾದ ನಂತರ ನಮ್ಮ ಸಹೋದರರ ನಡುವೆ ವಿಭಾಗ ಆಗಿರುತ್ತದೆ. ಸುಮಾರು 1998 ರಲ್ಲಿ ನನ್ನ ಮತ್ತು ನನ್ನ ಸಹೋದರರ ನಡುವೆ ವಿಭಾಗ ಆಗಿರುತ್ತದೆ. 1998 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳನ್ನು ಸೇರಿಸಿ ವಿಭಾಗ ಮಾಡಿಕೊಂಡಿರುತ್ತೇವೆ. ನನಗೆ ಸರ್ವೇ ನಂಬರ್ 71/10 ರಲ್ಲಿ ನನಗೆ ಒಂಭತ್ತೂವರೆ ಗುಂಟೆ ಬಂದಿದ್ದು ಅದರಲ್ಲಿ ಐದೂವರೆ ಗುಂಟೆ ಜಮೀನು ಭೂ ಸ್ವಾಧೀನ ಆಗಿರುತ್ತದೆ. ನನಗೆ ಸರ್ವೇ ನಂಬರ್ 71/10 ರಲ್ಲಿ ಒಂಭತ್ತೂವರೆ ಗುಂಟೆ ಬಂದಿದ್ದು ಅದರಲ್ಲಿ ಐದೂವರೆ ಗುಂಟೆ ಭೂ ಸ್ವಾಧೀನ ಆಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ಈಗ ಹಾಲಿ ಆರ್ ಟಿ ಸಿ ಯಲ್ಲಿ ಒಂಭತ್ತೂವರೆ ಗುಂಟೆ ಜಮೀನು ಇದೆ. ಸದರಿ ಆರ್ ಟಿ ಸಿ ಯಲ್ಲಿ ಒಂಭತ್ತೂವರೆ ಗುಂಟೆ ಚಾಲ್ತಿಯಲ್ಲಿದ್ದು ಐದೂವರೆ ಗುಂಟೆ ಕಾಲುವೆಗೆ ಸ್ವಾಧೀನ ಆಗಿದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಆರ್ ಟಿ ಸಿ ಯಲ್ಲಿ ಐದೂವರೆ ಗುಂಟೆ ಕಾಲುವೆಗೆ ಸ್ವಾಧೀನ ಆಗಿದೆ ಎಂದು ನಮೂದಾಗಿರುವುದನ್ನು ನಾನು ದುರುಪಯೋಗಪಡಿಸಿಕೊಂಡು ಸುಳ್ಳು ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಪತ್ರದ ಖಂಡಿಕೆ 6 ರಲ್ಲಿ ನಾನು ಸರ್ವೇ ನಂಬರ್ 71/10 ರಲ್ಲಿ

8 ಗುಂಟೆ ಭೂ ಸ್ವಾಧೀನ ಆಗಿದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಸದರಿ ವಾದಪತ್ರದಲ್ಲಿ ನನಗೆ 15 ಗುಂಟೆ ಜಮೀನು ವಿಭಾಗಕ್ಕೆ ಬಂದಿದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ಹೆಸರಿಗೆ ಒಂಭತ್ತೂವರೆ ಗುಂಟೆ ಪೈಕಿ ಐದೂವರೆ ಗುಂಟೆ ಭೂ ಸ್ವಾಧೀನ ಆಗಿ ಉಳಿಕೆ ನಾಲ್ಕು ಗುಂಟೆ ಜಮೀನು ಇದೆ ಎಂದು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ. ನನಗೆ ಪಾಲುಪಟ್ಟಿಯಲ್ಲಿ ಒಂಭತ್ತೂವರೆ ಗುಂಟೆ ಮಾತ್ರ ಬಂದಿದೆ ಎಂದರೆ ಸರಿ. ವಾದಪತ್ರದಲ್ಲಿ 15 ಗುಂಟೆ ಬಂದಿದೆ ಎಂದು ತಿಳಿಸಿರುವುದು ತಪ್ಪು ಎಂದರೆ ಸರಿ. ವಾದಪತ್ರದ ಷೆಡ್ಯೂಲ್ ನಲ್ಲಿ 71/10 ರ ಆಸ್ತಿಯನ್ನು ನಮೂದು ಮಾಡಿರುವುದಿಲ್ಲ. ನನಗೆ ಪಾಲುಪಟ್ಟಿಯಲ್ಲಿ ಒಂಭತ್ತೂವರೆ ಗುಂಟೆ ಮತ್ತು ನನ್ನ ಅಣ್ಣನಿಗೆ ಐದೂವರೆ ಗುಂಟೆ ಬಂದಿತ್ತು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಆದ ವಿಭಾಗದ ಮೇಲೆ ಖಾತೆ ದಾಖಲಾಯಿತು ಎಂದರೆ ಸರಿ. ನನಗೆ ಸದರಿ ವಿಭಾಗದ ಪ್ರಕಾರ ಎಂಟೂವರೆ ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಅಣ್ಣನಿಗೆ ನಾಲ್ಕೂವರೆ ಗುಂಟೆ ಬಂದಿದೆ ಎಂದು ನಮೂದಿದೆ ಎಂದರೆ ಸರಿ. ಸದರಿ ಎಂ ಆರ್ ಆಧಾರದ ಮೇಲೆ ಪಹಣಿ ದಾಖಲಾಗಿದೆ ಎಂದರೆ ಸರಿ. ಈಗಿನ ಆರ್ ಟಿ ಸಿ ಯೂ ಸಹ ಸದರಿ ದಾಖಲೆಯ ಆಧಾರದ ಮೇಲೆ ನಮೂದಾಗಿದೆ ಎಂದರೆ ಸರಿ. ಸರ್ವೇ ನಂಬರ್ 71/10 ರಲ್ಲಿ ಒಟ್ಟು ವಿಸ್ತೀರ್ಣ 15 ಗುಂಟೆ ಇದೆ ಎಂದರೆ ಸರಿ. ಸದರಿ ಕೈಬರವಣಿಗೆಯ ಪಹಣಿಯಲ್ಲಿ ಒಟ್ಟು 15 ಗುಂಟೆಯ ಆಸ್ತಿಯ ಪೈಕಿ ಐದೂವರೆ ಗುಂಟೆ ಆಸ್ತಿಯನ್ನು ನನ್ನ ಅಣ್ಣನಾದ ತಿಮ್ಮೇಗೌಡನು ಉಳಿಸಿಕೊಂಡು ಉಳಿಕೆ ಒಂಭತ್ತೂವರೆ ಗುಂಟೆ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಸರಿ. ಕಾಲುವೆ ಬರುವುದಕ್ಕಿಂತಲೂ ಮುಂಚೆ ನನ್ನ ಹೆಸರಿನಲ್ಲಿ ಒಂಭತ್ತೂವರೆ

ಗುಂಟೆ ಮತ್ತು ನನ್ನ ಅಣ್ಣನಾದ ತಿಮ್ಮೇಗೌಡರ ಹೆಸರಿನಲ್ಲಿ ಐದೂವರೆ ಗುಂಟೆ ಖಾತೆ ಇತ್ತು ಎಂದರೆ ಸರಿ. ಭೂ ಸ್ವಾಧೀನ ಆಗಿರುವ ದಾಖಲೆಯಲ್ಲಿ ಎಲ್ಲಾ ಜಮೀನುಗಳ ವಿಸ್ತೀರ್ಣ ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರಿಲಿಮಿನರಿ ನೋಟಿಫಿಕೇಶನ್, ಅಂತಿಮ ನೋಟಿಫಿಕೇಶನ್ ಮತ್ತು ಅವಾರ್ಡ್‌ನಲ್ಲಿ ನನ್ನ ಹೆಸರು ಇರುವುದಿಲ್ಲ, ಸಾಕ್ಷಿ ಮುಂದುವರೆದು ಭೂ ಸ್ವಾಧೀನವನ್ನು ನನ್ನ ಅಣ್ಣನೇ ಮಾಡಿಸುತ್ತಿದ್ದನು ಎಂದು ನುಡಿಯುತ್ತಾರೆ. ನನಗೆ ಸೇರಿದ ಸರ್ವೇ ನಂಬರ್ 71/7 ರಲ್ಲಿ ಎರಡು ಗುಂಟೆ ಜಮೀನು ಸ್ವಾಧೀನ ಆಗಿರುತ್ತದೆ. ಎಲ್ ಐ ಸಿ ಯ ಐ ತೀರ್ಪಿನಲ್ಲಿ ನನ್ನ ಹೆಸರು ಇರುವುದಿಲ್ಲ. ನನ್ನ ಅಣ್ಣನ ಹೆಸರಿನಲ್ಲಿ ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 71/8 ರಲ್ಲಿ 8 ಗುಂಟೆ, 71/10 ರಲ್ಲಿ 8 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ತೀರ್ಪು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಎಲ್ ಐ ಸಿ ನಂಬರ್ 2/2018 ರ ಐ ತೀರ್ಪನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ.

2. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಖಂಡಿಕೆ 4 ರಲ್ಲಿ ನನ್ನ ಹೆಸರಿನಲ್ಲಿ 15 ಗುಂಟೆ ಜಮೀನು ಇದ್ದು, ಕಾವೇರಿ ನೀರಾವರಿ ನಿಗಮ ಹೆಸರಿನಲ್ಲಿ ಎಂಟು ಗುಂಟೆ ಸ್ವಾಧೀನ ಆಗಿದ ಎಂದು ತಿಳಿಸಿರುವುದು ನನಗೆ ಗೊತ್ತಿಲ್ಲ. ನನ್ನ ಹೆಸರಿನಲ್ಲಿದ್ದ ಎಂಟು ಗುಂಟೆ ಜಮೀನು 71/10 ರಲ್ಲಿ ಭೂ ಸ್ವಾಧೀನ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 71/10 ರಲ್ಲಿ ಒಟ್ಟು ವಿಸ್ತೀರ್ಣ 15 ಗುಂಟೆ ಪೈಕಿ ನನಗೆ ಒಂಭತ್ತೂವರೆ ಗುಂಟೆ ಮತ್ತು ನನ್ನ ಅಣ್ಣನಿಗೆ ಐದೂವರೆ ಗುಂಟೆ ಆಸ್ತಿ ವಿಭಾಗದಲ್ಲಿ ಬಂದಿದ್ದು ಅವರಿಗೆ ಸೇರಿದ್ದ ಐದೂವರೆ ಗುಂಟೆ ಆಸ್ತಿಯು ಭೂ

ಸ್ವಾಧೀನ ಆಗಿದ್ದು ನನ್ನ ಹೆಸರಿನಲ್ಲಿದ್ದ ಜಮೀನು ಭೂ ಸ್ವಾಧೀನ ಆಗಿಲ್ಲ ಎಂದರೆ ಸರಿಯಲ್ಲ. ಆರ್ ಟಿ ಸಿ ಯಲ್ಲಿ ನಮೂದಾಗಿರುವ ಐದೂವರೆ ಗುಂಟೆ ಆಸ್ತಿಯು ನನ್ನ ಅಣ್ಣನ ಹಿಸ್ಸೆಗೆ ಹೋಗಿದ್ದ ಆಸ್ತಿ ಎಂದರೆ ಸರಿಯಲ್ಲ. ಸರ್ವೇ ನಂಬರ್ 71/10 ರ ಆಸುಪಾಸಿನಲ್ಲಿ ಸರ್ವೇ ನಂಬರ್ 71/8, 71/7 ಜಮೀನು ಬರುತ್ತದೆ ಎಂದರೆ ಸರಿ. ಸರ್ವೇ ನಂಬರ್ 71/10 ಮತ್ತು ಸರ್ವೇ ನಂಬರ್ 71/8 ರ ನಡುವಿನಲ್ಲಿ ಕಾಲುವೆ ಹೋಗಿರುತ್ತದೆ ಎಂದರೆ ಸರಿ. ಭೂ ಸ್ವಾಧೀನವಾಗಿರುವ ಜಮೀನಿಗೂ ನನಗೂ ಯಾವುದೇ ಸಂಬಂಧ ಇಲ್ಲ, ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಸರ್ವೇ ನಂಬರ್ 71/10 ರಲ್ಲಿ ನನ್ನ ವಿಸ್ತೀರ್ಣ ಒಂಭತ್ತೂವರೆ ಗುಂಟೆಯಲ್ಲಿ ಭೂ ಸ್ವಾಧೀನ ಆಗಿದ್ದರೆ ನನ್ನ ಹೆಸರಿನಲ್ಲಿಯೆ ಪ್ರಾಥಮಿಕ ಅಧಿಸೂಚನೆ, ಅಂತಿಮ ಅಧಿಸೂಚನೆ ಮತ್ತು ಅವಾರ್ಡ್ ಆಗುತ್ತಿತ್ತು ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಒಟ್ಟು ಒಂಭತ್ತೂವರೆ ಗುಂಟೆ ಆಸ್ತಿಯ ಪೈಕಿ ಐದೂವರೆ ಗುಂಟೆ ಭೂ ಸ್ವಾಧೀನವಾಗಿದ್ದು ಉಳಿಕೆ 4 ಗುಂಟೆ ಆಸ್ತಿ ನನ್ನ ಹೆಸರಿನಲ್ಲಿ ಇದೆ ಎಂದು ಬರೆಸಿರುವುದಿಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ಸಹಿ ನನ್ನ ಸಹಿ ಆಗಿರುತ್ತದೆ. ಈಗಾಗಲೇ ನಮ್ಮ ಕುಟುಂಬದಲ್ಲಿ 1998 ರಲ್ಲಿಯೇ ವಿಭಾಗವಾಗಿದ್ದು ಹಣಕ್ಕಾಗಿ ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಉದ್ದೇಶ ಪೂರಕವಾಗಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವಾ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
C/C 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.